# ನಟನೊಳಗೆ ನಿರ್ದೇಶಕನೂ ಇರ್ತಾನೆ

**ಅಪ್ಪಣ್ಣ ರಾಮದುರ್ಗ**

**ಝೀ ಕನ್ನಡದ 'ಕಾಮಿಡಿ ಕಿಲಾಡಿ' ನಟ**




◆ **ನಾಟಕ ಅಕಾಡೆಮಿ ಪ್ರಶಸ್ತಿಗೆ ಭಾಜನರಾಗಿದ್ದೀರಿ. ಕಿರುತೆರೆ ಸಿನಿಮಾದಲ್ಲಿ ಇದ್ದು ರಂಗಭೂಮಿ ಬಗ್ಗೆ ಏನು ಹೇಳುತ್ತೀರಿ?**

ಬಣ್ಣದ ಲೋಕದ ಸುದೀರ್ಘ ಪ್ರಯಾಣದಲ್ಲಿ ನನ್ನ ಶ್ರಮಕ್ಕೆ ಸಿಕ್ಕ ಫಲ ಎಂದುಕೊಂಡಿದ್ದೇನೆ. ಇದು ನನಗೆ ಪಾಠವನ್ನು ಹೇಳಿದ ಗುರುಗಳ ಕಾಣಿಕೆ ಎಂದು ಭಾವಿಸಿದ್ದೇನೆ. ರಂಗಭೂಮಿ, ಕಿರುತೆರೆ, ಸಿನಿಮಾದಲ್ಲಿ ನನ್ನನ್ನು ರೂಪಿಸಿದ ಸಾಕಷ್ಟು ಗುರುಗಳಿದ್ದಾರೆ. ಒಂದೊಂದು ಹಂತದಲ್ಲಿ ಒಬ್ಬೊಬ್ಬರು ಕೈಹಿಡಿದು ಮುಂದೆ ನೆಡೆಸಿದ್ದಾರೆ. ಅವರ ಮಾರ್ಗದರ್ಶನ ನನಗೊಂದು ಗುರುತನ್ನು ನೀಡಿವೆ. ನನ್ನ ಜೀವನದ ಕೊನೆಯ ಕ್ಷಣದ ತನಕ ನಾನು 'ಎಲ್' ಬೋರ್ಡ್ ಹಾಕಿಕೊಂಡಿರಲು ಬಯಸುತ್ತೇನೆ. ಯಾವತ್ತೂ ನಾನು ಕಲಿಯುವ ವಿದ್ಯಾರ್ಥಿ. ಈಗೇನೋ ಅಕಾಡೆಮಿ ಲೈಸೆನ್ಸ್ ಕೊಟ್ಟಿದೆ ಅಷ್ಟೇ. ಆ ಮೂಲಕ ಒಳ್ಳೆಯ ಕೆಲಸ ನಿರ್ವಹಿಸಲು ಉತ್ತೇಜನ ಕೊಟ್ಟಿದ್ದಾರೆ.

◆ **ಸಿನಿಮಾ–ಕಿರುತೆರೆಯ ನಡುವೆ ರಂಗಭೂಮಿಯಲ್ಲಿ ಹೇಗೆ ತೊಡಗಿದ್ದೀರಿ?**

'ಡ್ರಾಮಾ ಜೂನಿಯರ್' ಮೆಂಟರ್ ಆಗಿದ್ದೆ. 'ಕಾಮಿಡಿ ಕಿಲಾಡಿಗಳು' ಆಡಿಷನ್‌ಗಳ ಆಯ್ಕೆ ಸಮಿತಿಯಲ್ಲಿದ್ದೆ. ನಾನೇ ಅದಕ್ಕೆ ಸ್ಪರ್ಧಿಯಾಗುತ್ತೇನೆ. ಆ ಶೋನಲ್ಲಿ ರನ್ನರ್ ಅಪ್ ಆಗುತ್ತೇನೆ. 'ಯಾರಿಗುಂಟು ಯಾರಿಗಿಲ್ಲ' ಶೋ ನಿರೂಪಕ ಆಗುತ್ತೇನೆ. ನಂತರದ 'ಕಾಮಿಡಿ ಕಿಲಾಡಿಗಳು' ಸ್ಪರ್ಧೆಯಲ್ಲಿ ನಮ್ಮ ತಂಡವೇ ಗೆಲ್ಲುತ್ತದೆ. ಅದಾದ ಮೇಲೆ 'ಪೈಲ್ವಾನ್' ಸಿನಿಮಾಕ್ಕೆ ಅವಕಾಶ ಸಿಗುತ್ತದೆ. ಅದಾದ ಮೇಲೆ 20 ಸಿನಿಮಾಗಳನ್ನು ಒಂದಾದ ಮೇಲೆ ಒಂದು ಮಾಡುತ್ತೇನೆ. ಇತ್ತೀಚೆಗೆ ಶಿವರಾಜ್ ಕುಮಾರ್ ಮತ್ತು ಪ್ರಭುದೇವ್ ಅವರ ಜೊತೆ 'ಕರಟಕ ದಮನಕ'ದಲ್ಲಿ ಮಾಡಿದೆ. 'ಶೂನ್ಯ ರಂಗಭೂಮಿ' ಎಂಬ ತಂಡ ಕಟ್ಟಿಕೊಂಡು ಕೆಲಸ ಮಾಡುತ್ತಿದ್ದೇನೆ. ಸರ್ಕಾರಿ ಶಾಲೆಗಳಲ್ಲಿ ರಂಗಭೂಮಿ ಮೂಲಕ ಜಾಗೃತಿ ಮೂಡಿಸುವ ಪ್ರಾಜೆಕ್ಟ್ ಒಂದನ್ನು ನಿರ್ವಹಿಸುತ್ತಿದ್ದೇನೆ. ಆ ಮೂಲಕ ಮಕ್ಕಳಿಗೆ ಬಾಲ್ಯವಿವಾಹ, ಮಾದಕ, ಪ್ರೇಮ–ಕಾಮದ ಅಪಾಯವನ್ನು ಮನವರಿಕೆ ಮಾಡಬೇಕಿದೆ.

◆ **ನಿರ್ದೇಶಕ, ಮತ್ತೊಂದು ಕಡೆ ನಟ ಆದಾಗ ಐಡಿಯಾಲಜಿ ಮುಖಾಮುಖಿ ಆಗಲ್ವಾ?**

ಖಂಡಿತ ಆಗುತ್ತೆ. ಆದರೆ ಒಬ್ಬ ನಟನ ಒಳಗೆ ಯಾವತ್ತೂ ಒಬ್ಬ ನಿರ್ದೇಶಕ ಜೀವಂತ ಇರ್ತಾನೆ. ನಿರ್ದೇಶಕನ ಒಳಗೆ ಒಬ್ಬ ನಟ ಇರ್ತಾನೆ. ಈ ಸತ್ಯವನ್ನು ನಾವು ಒಪ್ಪಿಕೊಳ್ಳಬೇಕು. ನಮ್ಮ ಗುರುಗಳು ಕಲಿಸುವಾಗ ನಟರಾಗುತ್ತಿದ್ದರು. ಒಂದು ಪಾತ್ರವನ್ನು ಸರಿಯಾಗಿ ತರಲು ಸಾಧ್ಯ ಆಗದಿದ್ದಾಗ ಅವರೇ ಪಾತ್ರವಾಗುತ್ತಿದ್ದರು. ಪಾತ್ರದ ನಿಲುವು ಏನು ಅನ್ನುವುದನ್ನು ಹೇಳುತ್ತಿದ್ದರು. ನಟನಾಗಿ ಒಂದು ಸನ್ನಿವೇಶವನ್ನು ನಿರ್ದೇಶಕನ ಆಯಾಮದಲ್ಲಿ ನೋಡಿದಾಗ ಹೇಗೆ ಇರುತ್ತೆ ಎಂದೂ ಯೋಚಿಸುತ್ತೇನೆ. ನನ್ನ ವ್ಯಕ್ತಿತ್ವಕ್ಕೆ ನಿರ್ದೇಶಕ ಆಗಬೇಕಿತ್ತು. ಆಕಸ್ಮಿಕವಾಗಿ ನಟನಾಗಿದ್ದೇನೆ. ಆಶ್ಚರ್ಯ ಅಂದರೆ, ಹೆಚ್ಚು ಅವಕಾಶಗಳು ನಟನೆಗೆ ಬರ್ತಿವೆ. ಬಂದ ಅವಕಾಶವನ್ನು ಕಳೆದುಕೊಳ್ಳುವ ವ್ಯಕ್ತಿ ನಾನಲ್ಲ. ಅದು ನನ್ನ ಪಾಲಿನ ಅನ್ನ ಎನ್ನುವ ಭಾವ ನನ್ನದು. ಎಂತಹ ಪಾತ್ರ ಕೊಟ್ಟರೂ ಮಾಡುತ್ತೇನೆ. ನಟನಾದಾಗ ನಿರ್ದೇಶಕನಾಗಿ, ನಿರ್ದೇಶಕನಾದಾಗ ನಟನಾಗಿ ಗೊಂದಲಕ್ಕೆ ಒಳಗಾಗುತ್ತೇನೆ. ನನ್ನೊಳಗೆ ಪರಸ್ಪರರು ಜಗಳ ಆಡುತ್ತಾರೆ. ರಂಗಭೂಮಿಯಲ್ಲಿ 'ಮುರಿದು ಕಟ್ಟೋದು' ಎಂಬ ಮಾತಿದೆ. ಅದನ್ನೇ ಮಾಡುತ್ತಿದ್ದೇನೆ. ನಿರ್ದೇಶಕನಾಗಿ ಕೆಲಸ ಮಾಡುವಾಗ ಹೀಗೇ ಬರಬೇಕು ಹಾಗೇ ಮಾಡಬೇಕು ಎನ್ನುವ ವಿಚಾರ ಬರುತ್ತದೆ. ಸಾಮಾಜಿಕ ಮಾಧ್ಯಮದಲ್ಲಿ ಪ್ರಚಾರ ಮಾಡುವ ಕಾರ್ಯದಲ್ಲಿ ತೊಡಗಿದ್ದೆ. ಸ್ವಾಮಿ–ಜ್ಯೋತಿಷ್ಯ ಹೇಳುವವರು ನನ್ನ ಸಂಪರ್ಕಕ್ಕೆ ಬಂದು ನಮ್ಮ ಭವಿಷ್ಯದ ಬಗ್ಗೆ ಪ್ರಮೋಷನ್‌ಗೆ ಕೇಳಿದರು. ಎಷ್ಟೇ ದುಡ್ಡುಕೊಟ್ಟರು ಅದನ್ನು ಮಾಡುವುದಿಲ್ಲ ಎಂದು ಸುಮ್ಮನಾದೆ. ಇಂತಹ ಐಡಿಯಾಲಜಿ ಇರುವಾಗ ಎದುರಾಗುವ ಸವಾಲನ್ನು ಸೂಕ್ಷ್ಮವಾಗಿ ಬಗೆಹರಿಸಬೇಕು.

◆ **ನಿಮ್ಮ ಹಿಂದೆ ತಿರುಗಿ ನೋಡಿದರೆ ಏನೇನು ಕಾಣಿಸುತ್ತದೆ?**

ಹಿಂದೆ ತಿರುಗಿ ನೋಡುವ ಸಂದರ್ಭವೇ ನನಗೆ ಬರಲಿಲ್ಲ. ಹಂತ ಹಂತವಾಗಿ ಮೇಲೆ ಏರುತ್ತಲೇ ಬಂದಿದ್ದೇನೆ. ಒಟ್ಟಿನಲ್ಲಿ ಈ ಕ್ಷಣಕ್ಕೆ ಹಿಂದಕ್ಕೆ ನೋಡಿದರೆ, ಅನುಭವಿಸಿದ ಅವಮಾನ ಮತ್ತು ನಮ್ಮ ಬಡತನ ಢಾಳಾಗಿ ಕಾಣಿಸುತ್ತವೆ. ನನ್ನ ತಾಯಿ ಮತ್ತೊಬ್ಬರ ಮನೆಯಲ್ಲಿ ಪಾತ್ರೆ ತೊಳೆದು ನಮಗೆ ಅನ್ನ ತಂದು ಹಾಕಿದ್ದಾಳೆ. ಆಕೆ ನನಗೆ ಮೊದಲು ಮನುಷ್ಯ ಆಗಬೇಕು. ದುಡಿದು ತಿನ್ನಬೇಕು ಎನ್ನುತ್ತಿದ್ದಳು. ಆಕೆಗೆ ತನ್ನ ಮಕ್ಕಳು ಸಾಧಕರಾಗುವುದಕ್ಕಿಂತ ನಾಲ್ಕು ದಿನ ಚೆನ್ನಾಗಿ ಇದ್ದರೆ ಸಾಕು ಎನ್ನುವುದೇ ದೊಡ್ಡ ಕನಸಾಗಿತ್ತು. ನಾನು ಇವತ್ತು ಅವರನ್ನು ಕರೆದುಕೊಂಡು ಬಂದಿದ್ದೇನೆ. ಅವ್ವನ ಹೆಸರು ಕಲ್ಲವ್ವ. ಆ ಹೆಸರನ್ನು ಬೆಳೆಸಿದ್ದೇನೆ ಎಂದು ನಮ್ಮ ಅವ್ವನಿಗೆ ಹೇಳುತ್ತೇನೆ. ಅಪ್ಪ ಮಹದೇವಪ್ಪ ನಮಗೆ ಮೋಸ ಮಾಡಿ ಹೋದರು. ಕುಡಿತದ ವ್ಯಸನಕ್ಕೆ ತುತ್ತಾಗಿ ನನ್ನ ಬಾಲ್ಯದಲ್ಲೇ ಅಸುನೀಗಿದರು. ನಮ್ಮ ಅವ್ವನ ತಾಯಿ ನೀಡಿದ ಜಮೀನನ್ನೂ ಮಾರಿದ್ದರು. ನಮ್ಮ ಕುಟುಂಬ ಬೀದಿಗೆ ಬಂದಿತ್ತು. ಬದುಕು ಬಲು ಭಾರ ಆಗಿತ್ತು. ಹಾಗೆ ಇದ್ದಿದ್ದರಿಂದಲೇ ಇವತ್ತು ಇಲ್ಲಿಗೆ ಬಂದಿದ್ದೇನೆ. ಅವಮಾನ ನಡೆದ ಜಾಗದಲ್ಲೇ ಸನ್ಮಾನವನ್ನು ಪಡೆದಿದ್ದೇನೆ. ಆ ಎಲ್ಲ ನೋವು ಇಲ್ಲದೇ ಹೋಗಿದ್ದರೆ ಇವತ್ತು ನಾನು ಸೈ ಅನ್ನಿಸಿಕೊಳ್ಳುತ್ತಿರಲಿಲ್ಲ.

**■ ರಾಘವೇಂದ್ರ ಕೆ.**